ಈ ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ೩೨೩ ಕೊಳವೆ ಬಾವಿಗಳನ್ನು ತೋಡಲಾಗಿದ್ದು, ಅವುಗಳಲ್ಲಿ ೨೬೪ ಕೊಳವೆ ಬಾವಿಗಳು ಫಲಪ್ರದವಾಗಿ ಅವುಗಳಿಗೆ ಕೈ ಪಂಪುಗಳನ್ನು ಜೋಡಿಸಿ, ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಇದಲ್ಲದೆ ೧೧ ಸಣ್ಣ ಪ್ರಮಾಣದ ನೀರು ಸರಬರಾಜು ಯೋಜನೆಗಳನ್ನು ಅನುಮೋದಿಸಲಾಗಿದೆ. ಮಂತ್ತು ೫ ಹಳ್ಳಿಗಳಿಗೆ ಗ್ರಾಮಾಂತರ ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಇನ್ನೂ ಎರಡು ಗ್ರಾಮಗಳ ನೀರು ಸರಬರಾಜು ಯೋಜನೆಗಳು ಪ್ರಗತಿಯಲ್ಲಿವೆ. ಇಷ್ಟಾದರೂ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಅಭಾವ ಕಂಡುಬರುವುದು ಸರ್ವ ಸಾಮಾನ್ಯವಾಗಿದ್ದು, ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವದ ಗಂಭೀರ ಪರಿಸ್ಥಿತಿಗೆ ಒಳಗಾಗಿರುವ ಹಳ್ಳಿಗಳನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಿನ ಕೊಳವೆ ಬಾವಿಗಳನ್ನು ಹಾಕಲು ಏರ್ಪಾಡು ಮಾಡಲಾಗುತ್ತಿದೆ.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ ಸೂಳ್ಯ ಪುರಸಭೆಯನ್ನು ಮಂಡಲ್ ಪಂಚಾಯತಿಯಾಗಿ ಪರಿವರ್ತನೆಗೊಳಿಸಿದಮೇಲೆ ಕೊಳವೆ ಬಾವಿಗಳ ಸಲುವಾಗಿ ೨೦ ಲಕ್ಷ ರೂಪಾಯಿಗಳು ಮಂಜೂರಾಗಿದ್ದರೂ ಟೆಂಡರ್ ಕರೆದು ನೀರು ಸರಬರಾಜು ಪಾಡಕ್ಕಂಥ ವ್ಯವಸ್ಥೆಯನ್ನು ಕೈಗೊಂಡಿಲ್ಲ. ಆದ್ದರಿಂದ ಟೆಂಡರನ್ನು ಕರೆದು ಕೊಳವೇ ಬಾವಿಗಳನ್ನು ತೆಗೆಯುವ ಕಾರ್ಯವನ್ನು ಆಗತ್ಯವಾಗಿ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದಂತೆ ಅಗತ್ಯವಾಗಿ ಬೇಕಾಗಿರತಕ್ಕಂಥ ಜಾಗಗಳಲ್ಲಿ ಕೊಳವೆ ಬಾವಿಗಳನ್ನು ತೆಗೆಯತಕ್ಕಂಥ ವ್ಯವಸ್ಥೆ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಕೆ. ಕುಶಾಲ.—ಗ್ರಾಮಾಂತರ ಪ್ರದೇಶಗಳಲ್ಲಿ ಹನ್ನೊಂದು ಮಿನಿ ವಾಟರ್ ಸಪ್ಲೈ ಯೋಜನೆಯನ್ನು ಕೈಗೊಂಡಿದ್ದು ಅದನ್ನು ಅರ್ಧದಲ್ಲಿಯೇ ನಿಲ್ಲಿಸಿರುತ್ತಾರೆ. ಈ ಯೋಜನೆಯನ್ವಯ ನೀರು ಸರಬರಾಜು ಮಾಡಲು ಕೈಗೊಂಡಿರುವ ಕೆಲಸಗಳು ಪೂರ್ತಿಯಾಗಿರುವ ಕಡೆಗಳಲ್ಲಿ ವಿದ್ಯುಚ್ಛಕ್ತಿಯ ಸರಬರಾಜು ಇಲ್ಲದೆ ಹಾಗೆಯೇ ಇರುತ್ತದೆ. ಇದಕ್ಕೆ ಆದಷ್ಟು ಬೇಗನೆ ವಿದ್ಯುಚ್ಛಕ್ತಿ ಸರಬರಾಜು ಮಾಡತಕ್ಕಂಥ ಕಾರ್ಯವನ್ನು ಕೈಗೊಳ್ಳುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ ೧೧ ಸಣ್ಣ ಪ್ರಮಾಣದ ಕುಡಿಯುವ ನೀರಿನ ಯೋಜನೆಗಳನ್ನು ಏನು ತೆಗೆದುಕೊಂಡಿರುತ್ತೇವೆ. ಅದಕ್ಕೆ ಈ ವರ್ಷ ಅಂದರೆ ಮಾರ್ಚ್ ಮುಗಿಯುವುದರೊಳಗೆ ಸಂಪೂರ್ಣವಾಗಿ ವಿದ್ಯುತ್ತನ್ನು ಒದಗಿಸಿ ಅದಕ್ಕೆ ಬೇಕಾದಂಥ ಸಲಕರಣೆಗಳನ್ನು ಒಳಪಡಿಸಿ ಸಂಪೂರ್ಣವಾಗಿ ದುರಸ್ತಿಗೊಳಿಸುತ್ತೇವೆಂದು ಹೇಳುತ್ತೇನೆ.

(೨) ಗೇಣಿ ವಿವಾದಗಳ ಮೊಕದ್ದಮೆಗಳ ಇತ್ಯರ್ಥಗಳಲ್ಲಿ ನಿಧಾನವಾಗಿರುವುದರಿಂದಂಟಾದ ತೊಂದರೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲು).—ಮಾನ್ಯ ಅಧ್ಯಕ್ಷರೇ ಉಚ್ಚ ನ್ಯಾಯಾಲಯದಲ್ಲಿರುವ ಗೇಣಿ ವಿವಾದಗಳ ಮೊಕದ್ದಮೆಗಳನ್ನು ಜಿಲ್ಲಾ ಮಟ್ಟದ ನ್ಯಾಯಾಲಯಗಳಿಗೆ ವರ್ಗಾಯಿಸದೆ ಇರುವ ಅನಿಶ್ಚತೆಯ ಪರಿಸ್ಥಿತಿಯಿಂದ ಗೇಣಿದಾರರಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಕಾನೂನು, ಹಾಗೂ ಸಂಸದೀಯ ವ್ಯವಹಾರ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ಶ್ರೀ ಆರ್. ವೆಂಕಟರಾಮಯ್ಯನವರು ನಿಯಮ ೩೩ ರಡಿಯಲ್ಲಿ ಕರ್ನಾಟಕದಲ್ಲಿ ಗೇಣಿ ವಿವಾದಗಳ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿರುವ ರಿಟ್‌ಗಳನ್ನು (ಮೊಕದ್ದಮೆಗಳನ್ನು) ಜಿಲ್ಲಾವಾರು ಜಿಲ್ಲೆಗಳಿಗೆ ಬದಲಾಯಿಸಿ ಜಿಲ್ಲಾ ಮಟ್ಟದಲ್ಲಿಯೇ ತೀರ್ಮಾನಿಸಬೇಕೆಂದು ತೀರ್ಮಾನಿಸಿ ಹಲವಾರು ತಿಂಗಳಾದರೂ ಜಿಲ್ಲಾಮಟ್ಟಗಳಲ್ಲಿ ನ್ಯಾಯಾಧೀಶರುಗಳನ್ನು ಸ್ಥಾಪಿಸಿ ಅಲ್ಲಿಗೆ ಮೊಕದ್ದಮೆಗಳನ್ನು ಬದಲಾಯಿಸಿಲ್ಲ ಮತ್ತು ಈಗಿರುವ ಅನಿಶ್ಚತೆಯ ಪರಿಸ್ಥಿತಿಯಿಂದ ಗೇಣಿದಾರರಿಗೆ ತೊಂದರೆಯಾಗಿ ಅನ್ಯಾಯಗಳಿಗೆ ಅವಕಾಶ ಕೊಟ್ಟಂತಾಗಿದೆ ಯಾದುದರಿಂದ ಇದರ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು ಹೇಳಿಕೆ ಕೊಡಬೇಕಾಗಿ ಸೂಚನೆ ಕಳುಹಿಸಿದ್ದಾರೆ.

ಗೇಣಿ ವಿವಾದಗಳ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿರುವ ರಿಟ್‌ಗಳನ್ನು ಜಿಲ್ಲಾಮಟ್ಟದಲ್ಲಿಯೇ ತೀರ್ಮಾನಿಸಲು ಅಧಿಸೂಚನೆ ಸಂಖ್ಯೆ. ಆರ್‌ಡಿ ೨೮ ಎಲ್‌ಆರ್‌ಇ ೮೫ (ಪಿ) ದಿನಾಂಕ ೨೭-೧೨-೧೯೮೫ ರಂದು ಭೂ ಸುಧಾರಣಾ ಕಾನೂನಿನ ಕಲಂ ೧೧೬ ಎ ಮತ್ತು ೧೧೬ ಬಿ ಗಳಿಗೆ ಹೊಸ ಉಪ-ಪ್ರಕರಣಗಳನ್ನು ಸೇರಿಸಿ ಕಾನೂನನ್ನು ತಿದ್ದುಪಡಿ ಮಾಡಲಾಗಿದೆ. ಈ ತಿದ್ದುಪಡಿಯಂತೆ ಜಿಲ್ಲಾ ಮಟ್ಟದಲ್ಲಿ ಭೂ ನ್ಯಾಯಾಧೀಕರಣಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ಅಧಿಕಾರವಿದೆ ಮತ್ತು ಈಗಾಗಲೇ ಪ್ರತಿ ಜಿಲ್ಲೆಗೊಂದರಂತೆ ಭೂ ಸುಧಾರಣಾ ಅಪೀಲು ಪ್ರಾಧಿಕಾರಗಳನ್ನು ಸ್ಥಾಪಿಸಲಾಗಿದೆ. ಉಚ್ಚ ನ್ಯಾಯಾಲಯದಿಂದ ಸಿವಿಲ್ ನ್ಯಾಯಾಧೀಶರ ಸೇವೆ ದೊರಕಿದ ತಕ್ಷಣ ಮತ್ತು ಅವಶ್ಯ ಕಟೀರಿಗಳು ಸಿದ್ಧವಾದ ಕೂಡಲೇ ಈ ನ್ಯಾಯಾಧೀಕರಣಗಳು ಕಾರ್ಯಾರಂಭ ಮಾಡುವುವು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಈಗಾಗಲೇ ಆರು ತಿಂಗಳಿಂದಲೂ ಭೂ ಸುಧಾರಣೆಯ ಬಗ್ಗೆ ಹೈಕೋರ್ಟಿನಲ್ಲಿರತಕ್ಕಂಥ ಕೇಸ್‌ಗಳನ್ನು ಇತ್ಯರ್ಥಗೊಳಿಸಲು ಜಿಲ್ಲಾಮಟ್ಟದಲ್ಲಿ ಒಂದು ವ್ಯವಸ್ಥೆಯನ್ನು ಮಾಡಿ ಟ್ರಾನ್ಸ್‌ಫರ್ ಮಾಡುತ್ತೇವೆಂದು ಹೇಳಿದ್ದರಿಂದ ಹೈಕೋರ್ಟಿನಲ್ಲಿರ ತಕ್ಕಂಥ ಕೇಸ್‌ಗಳು ಯಾವುದೂ ಇನ್ನುವರೆಗೂ ಇತ್ಯರ್ಥವಾಗಿಲ್ಲ. ಇದರಿಂದಾಗಿ ಜಮೀನುದಾರರು ಈ ಅವಕಾಶವನ್ನು ಉಪಯೋಗಿಸಿಕೊಂಡು ಗೇಣಿದಾರರನ್ನು ಓಡಿಸುತ್ತಿರುತ್ತಾರೆ. ಹೈಕೋರ್ಟಿಗೆ ಹೋದರೆ ನಮಗೆ ಇದು ಅನ್ವಯವಾಗುವುದಿಲ್ಲ, ಜಿಲ್ಲಾ ಕೋರ್ಟಿಗೆ ಹೋಗಿ ಎಂದು ಹೇಳುತ್ತಾರೆ. ಇಂಥ ಒಂದು ಅನಿಶ್ಚಿತತೆಯಿಂದ ಗೇಣಿದಾರರಿಗೆ ಬಹಳ ತೊಂದರೆಯಾಗಿರುತ್ತದೆ. ಆರು ತಿಂಗಳಿಂದಲೂ ಇಂಥ ಒಂದು ಪರಿಸ್ಥಿತಿ ಇರುತ್ತದೆ. ಸ್ಪಷ್ಟವಾಗಿ ಹೇಳಿ, ಯಾವಾಗ ಈ ಅವ್ಯವಸ್ಥೆಯನ್ನು ಸರಿ ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.— ಆದಷ್ಟು ಬೇಗ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಬೇಗ ಎಂದರೆ ಯಾವಾಗ. ಸ್ಪಷ್ಟವಾಗಿ ಹೇಳಿ ? ಇನ್ನು ಒಂದು ತಿಂಗಳಲ್ಲಿಯೇ ಮಾಡುತ್ತೀರಾ, ಅಥವಾ ಇನ್ನು ಎರಡು ತಿಂಗಳಲ್ಲಿ ಮಾಡುತ್ತೀರಾ ? ಯಾವುದನ್ನೂ ಸ್ಪಷ್ಟವಾಗಿ ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಹೇಳಿದಂತೆ ೧೦೦ಕ್ಕೆ ೧೦೦ರಷ್ಟು ಸರಿಯಾದಂಥ ಉತ್ತರವನ್ನು ಕೊಟ್ಟಿದ್ದೇನೆ. ಆದ್ದರಿಂದ ಹೈಕೋರ್ಟ್‌ನವರನ್ನು ಕೇಳಿ ಅವರ ಸಹಾಯದೊಂದಿಗೆ ಆದಷ್ಟು ಬೇಗ ವ್ಯವಸ್ಥೆಯನ್ನು ಮಾಡುತ್ತೇನೆ.

(೩) ಬೆಳಗಾಂ ಮಹಾನಗರಸಭೆಯ ಕನ್ನಡ ಮತ್ತು ಉರ್ದು ಮಾತನಾಡುವ ಸದಸ್ಯರ ಸದಸ್ಯತ್ವವನ್ನೂ ಅನರ್ಜಿತಗೊಳಿಸಲು ಬೆದರಿಕೆ

ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬಿಳಗಿ).—ಮಾನ್ಯ ಅಧ್ಯಕ್ಷರೇ ಬೆಳಗಾಂ ಮಹಾನಗರ ಸಭೆಯ ಕನ್ನಡ ಹಾಗೂ ಉರ್ದು ಮಾತನಾಡುವ ಸದಸ್ಯರ ಸದಸ್ಯತ್ವವನ್ನು ಅನೂರ್ಜಿತಗೊಳಿಸುವುದಾಗಿ ಅಲ್ಲಿಯ ಮಹಾ ಪೌರರು ಬೆದರಿಕೆ ಹಾಕಿರುವುದರ ವಿಚಾರದ ಬಗ್ಗೆ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೇ, ಬೆಳಗಾಂ ಮಹಾನಗರ ಸಭೆಯ ಕನ್ನಡ ಹಾಗೂ ಉರ್ದು ಮಾತನಾಡುವ ಸದಸ್ಯರ ಸದಸ್ಯತ್ವವನ್ನು ಅನೂರ್ಜಿತಗೊಳಿಸುವುದಾಗಿ ಅಲ್ಲಿಯ ಮಹಾ ಪೌರರು ಬೆದರಿಕೆ ಹಾಕಿರುವುದರ ವಿಚಾರದ ಬಗ್ಗೆ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳ ಗಮನ ಸೆಳೆಯಲಾಗುವುದು.

ಬೆಳಗಾಂ ಮಹಾ ನಗರಪಾಲಿಕೆಯ ಆಯುಕ್ತರನ್ನು ಸಂಪರ್ಕಿಸಿ ಗಮನ ಸೆಳೆಯುವ ವಿಷಯಕ್ಕೆ ಸಂಬಂಧಿಸಿದಂತೆ ನಿಜಸ್ಥಿತಿಯನ್ನು ಅರಿತುಕೊಳ್ಳಲಾಯಿತು.

ಈ ವರ್ಷದ ಜನವರಿ ತಿಂಗಳ ಕೊನೆಯ ವಾರದಲ್ಲಿ ಬೆಂಗಳೂರು ನಗರದಲ್ಲಿ ಒಂದು ಪ್ರದರ್ಶನ ನಡೆಯಿತು. ಬೆಳಗಾಂ ಮಹಾನಗರ ಪಾಲಿಕೆಯನ್ನು ವಿಸರ್ಜಿಸಬೇಕೆಂದು ಅವರ ಬೇಡಿಕೆಯಾಗಿತ್ತು.